ಅಸಲು ದಾವಾ ಸಂಖ್ಯೆ - 271/2019
ಪಿಡಬ್ಲ್ಯೂ - 01
ದಿನಾಂಕಃ 28-08-2025
ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ವಾದಿ ಪರ ಶ್ರೀ. ಎನ್ ಎಸ್ ಪಿ ವಕೀಲರಿಂದಃ**

ಈ ದಾವೆಯಲ್ಲಿ ನಾನು ವಾದಿಯಾಗಿದ್ದು, ಇಂದು ನಾನು ನನ್ನ ಮೌಖಿಕ ಸಾಕ್ಷ್ಯದ ಬದಲು ಈ ಮುಖ್ಯ ವಿಚಾರಣೆಯ ಪ್ರಮಾಣ ಪತ್ರವನ್ನು ಹಾಜರುಪಡಿಸಿದ್ದೇನೆ. ಇದರಲ್ಲಿ ಬರೆದ ಎಲ್ಲ ವಿಷಯ ನಿಜ ಮತ್ತು ಸರಿ ಇದ್ದು ನನಗೆ ಗೊತ್ತಿದೆ.

ನಾನು ಈ ಕೆಳಕಂಡ ದಸ್ತಾವೇಜುಗಳನ್ನು ಹಾಜರು ಪಡಿಸಿದ್ದೇನೆ.

ಮಂತ್ರೋಡಿ ಗ್ರಾಮದ ಸರ್ವೆ ನಂ. 104/2ಅ+2ಬ+2ಕ ರ ಮತ್ತು ಸರ್ವೆ ನಂ. 147/2 ರ ಉತಾರವನ್ನು ಹಾಜರುಪಡಿಸಿದ್ದು ಅವುಗಳನ್ನು ಕ್ರಮವಾಗಿ ನಿಪಿ- 1 ಮತ್ತು 2 ಎಂದು ಗುರುತಿಸಲಾಯಿತು.

ಹಿರೇಮಲ್ಲೂರ ಗ್ರಾಮ ಪಂಚಾಯತಿಯ ಆಸ್ತಿ ಸಂಖ್ಯೆಃ 287 ರ 2019-20 ನೇ ಸಾಲಿನ ಭೂಮಿ ಆಕರಣೆ ಯಾದಿಯನ್ನು ಹಾಜರುಪಡಿಸಿದ್ದು ಅದನ್ನು ನಿಪಿ- 3 ಎಂದು ಗುರುತಿಸಲಾಯಿತು.

ಹಿರೇಮಲ್ಲೂರ ಗ್ರಾಮದ ಸರ್ವೆ ನಂ. 93/188 ರ ಉತಾರವನ್ನು ಹಾಜರುಪಡಿಸಿದ್ದು ಅದನ್ನು ನಿಪಿ- 4 ಎಂದು ಗುರುತಿಸಲಾಯಿತು.

ಮಂತ್ರೋಡಿ ಗ್ರಾಮದ ಎಮ್ ಆರ್ ನಂ. ಎಚ್ 44/2018-19 ರ ಮ್ಯೂಟೇಶನ ರಿಜಿಸ್ಟರ ಎಕ್ಸಟ್ರಾಕ್ಟರನ್ನು ಹಾಜರುಪಡಿಸಿದ್ದು ಅದನ್ನು ನಿಪಿ- 5 ಎಂದು ಗುರುತಿಸಲಾಯಿತು.

ವಾದಿಯ ಶಾಲೆ ಬಿಟ್ಟ ಬಗ್ಗೆ ಪ್ರಮಾಣ ಪತ್ರ ಮತ್ತು ವ್ಯಾಸಂಗ ಮಾಡಿದ ಅಭ್ಯರ್ಥಿ ಪ್ರಮಾಣ ಪತ್ರವನ್ನು ಹಾಜರುಪಡಿಸಿದ್ದು ಅವುಗಳನ್ನು ಕ್ರಮವಾಗಿ ನಿಪಿ- 6 ಮತ್ತು 7 ಎಂದು ಗುರುತಿಸಲಾಯಿತು.

ಹಿರೇಮಲ್ಲೂರ ಗ್ರಾಮದ ಸರ್ವೆ ನಂ.93/187, 93/188 ಮತ್ತು 93/186 ರ ಉತಾರವನ್ನು ಹಾಜರುಪಡಿಸಿದ್ದು ಅವುಗಳನ್ನು ಕ್ರಮವಾಗಿ ನಿಪಿ- 8 ರಿಂದ 10 ಎಂದು ಗುರುತಿಸಲಾಯಿತು.

ಹಿರೇಮಲ್ಲೂರ ಗ್ರಾಮ ಪಂಚಾಯತಿಯ ಆಸ್ತಿ 287 ರ 2023-24 ನೇ ಸಾಲಿನ ಭೂಮಿ ಆಕರಣೆ ಯಾದಿಯನ್ನು ಹಾಜರುಪಡಿಸಿದ್ದು ಅದನ್ನು ನಿಪಿ- 11 ಎಂದು ಗುರುತಿಸಲಾಯಿತು.

ಹಿರೇಮಲ್ಲೂರ ಗ್ರಾಮ ಪಂಚಾಯತಿಯ ಆಸ್ತಿ 286 ರ 2023-24 ನೇ ಸಾಲಿನ ಭೂಮಿ ಆಕರಣೆ ಯಾದಿಯನ್ನು ಹಾಜರುಪಡಿಸಿದ್ದು ಅದನ್ನು ನಿಪಿ- 12 ಎಂದು ಗುರುತಿಸಲಾಯಿತು.

ಹಿರೇಮಲ್ಲೂರ ಗ್ರಾಮದ ಎಮ್ ಆರ್ ನಂ. ಎಚ್ 3/2020-21 ರ ಮ್ಯೂಟೇಶನ ರಿಜಿಸ್ಟರ ಎಕ್ಸಟ್ರಾಕ್ಟರನ್ನು ಹಾಜರುಪಡಿಸಿದ್ದು ಅದನ್ನು ನಿಪಿ- 13 ಎಂದು ಗುರುತಿಸಲಾಯಿತು.

ಆದ್ದರಿಂದ ದಾವೆಯಲ್ಲಿ ಕೋರಿಕೊಂಡಂತೆ ಡಿಕ್ರಿ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

**ಪಾಟೀ ಸವಾಲುಃ ಪಾಟೀ ಸವಾಲಿಗೆ ಕಾಲಾವಕಾಶ ಕೋರಿರುತ್ತಾರೆ, ನೀಡಲಾಯಿತು.**

( ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು.)

ಓ. ಹೆ. ಕೆ. ಸರಿ ಅದೆ.

ದಿವಾಣಿ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂಡಾಧಿಕಾರಿಗಳು, ಸವಣೂರು